ಪ್ರಯೋಜನ? ಗಿಡ ನೆಟ್ಟರೆ ಸಾಕೊ? ಹೀಗೆ ಪ್ರಶ್ನೆಗಳನ್ನು ಮಕ್ಕಳ ತಲೆಗೆ ತುಂಬಿ ಉತ್ತರ ಕಂಡುಕೊಳ್ಳಲು ಹುರಿದುಂಬಿಸುತ್ತಿದ್ದ. ಮಕ್ಕಳು ಅವನನ್ನು 'ಪ್ರಶ್ನೆಗಳ ನರಸಿಂಗಪ್ಪ' ಎಂದೇ ಕರೆಯುತ್ತಿದ್ದುದು.



ನರಸಿಂಗರಾಯ ಊರಿನ ನ್ಯಾಯ ಪಂಚಾಯ್ತಿಗಳಲ್ಲೂ ಪ್ರಶ್ನೆಗೆ ಪ್ರಶ್ನೆಗಳನ್ನು ಕಟ್ಟುತ್ತಿದ್ದ. ಕೆಲವು ತಗಾದೆಗಳನ್ನು ಅವನ ಪ್ರಶ್ನೆಗಳೇ ಪರಿಹರಿಸಿದ್ದುಂಟು. ಗಂಡಹೆಂಡತಿ ನಡುವೆ ಏನು ನಡೆದಿತ್ತೋ ಬಲ್ಲವರಿಲ್ಲ. ಊರಿನ ಚಾವಡಿಯ ಜಗುಲಿಗೆ ಸಂಸಾರವನ್ನು ತಂದುಕೊಂಡಿದ್ದರು. 'ನನಗೆ ಇವಳು ಬೇಡವೇ ಬೇಡ. ಫೈಸಲ್ ಮಾಡಿ' ಅನ್ನೋದು ಗಂಡನ ಅಹವಾಲು. ಏನು ಕೇಳಿದರೂ ಹೆಂಡತಿ ಮೌನಗೌರಿ. ಒತ್ತಾಯಿಸಿದರೆ ಮುಸುಮುಸು ಅಳು. ಯಾವ ರೀತಿ ಫೈಸಲ್ ಮಾಡುವುದೆಂದು ತೋಚದಾದರು ಪಂಚಾಯ್ತಿದಾರರು. ನೆರೆದಿದ್ದ ಜನರಲ್ಲಿ ಬರೀ ಗುಜುಗುಜು. ಆಗ ಕೆಮ್ಮಿದ ನರಸಿಂಗರಾಯ. ಅಲ್ಲಿ ನಿಶ್ಶಬ್ದ. ಅದರೊಳಗೆ ನಿಶ್ಶಬ್ದ. 'ನೀನು ಹೆಂಡತಿ ಬೇಡ ಅನ್ನೋದು ನಿನ್ನ ಸುಖಕ್ಕೋ, ಅವಳ ಸುಖಕ್ಕೋ? ನಿನ್ನ ಸುಖಕ್ಕಾದರೆ ಹೇಗೆ? ಅವಳ ಸುಖಕ್ಕಾದರೆ ಹೇಗೆ?' ನರಸಿಂಗರಾಯ ಕೇಳಿದ. ಗಂಡ ಉತ್ತರಿಸಲಿಲ್ಲ. ಕಾಲ ಅವನ ಉತ್ತರಕ್ಕಾಗಿ ನಿಂತಂತಿತ್ತು. ಯಾರೋ 'ಬೊಗುಳೋಲೇ. ನಮಗೇನು ಬೇರೆ ಕೆಲ್ಸ ಇಲ್ಲ ಅಂದ್ಕೊಂಡೀಯ?' ಎಂದು ಗದರಿಸಿದರು. ಅವನು ಮಾತಾಡಲಿಲ್ಲ. ಪ್ರಶ್ನೆಗಳ ಭಾರ ಅವನ ಮಾತನ್ನು ತುಳಿಯುತ್ತಿತ್ತು. 'ಅವನಿಗೆ ಟೈಮು ಕೊಡೋಣ. ಉತ್ತರದೊಂದಿಗೆ ಬರಲಿ. ಅಲ್ಲೀವರೆಗೆ ಗಂಡ ಹೆಂಡತಿ ಒಟ್ಟಿಗಿರಲಿ' ಎಂದು ನರಸಿಂಗರಾಯ ಆಡಿದ ಮಾತು ತೀರ್ಪೇ ಆಗಿತ್ತು. ಮುಂದೆ ಎಂದೂ ಅವನು ಪಂಚಾಯ್ತಿಗೆ ಬರಲೇ ಇಲ್ಲ. ಗಂಡ ಹೆಂಡಿರು ಸಂಸಾರ ಮಾಡಿಕೊಂಡಿದ್ದರು.

ವಿಧಾನಸಭೆಗೆ ಚುನಾವಣೆ ಪ್ರಕಟವಾಯಿತು. ಗುಂಪಾಗಿ ಕುಳಿತವರ ಬಾಯಿಗಳಲ್ಲಿ, ನಿಂತವರ ಮಾತುಗಳಲ್ಲಿ, ಜೊತೆಯಾಗಿ ನಡೆದಾಡುವವರ ನಡುವೆಯೂ ಚುನಾವಣೆಯ ಮಾತುಗಳೇ. ಈ ಎಲ್ಲರೊಡನೆ ಸೇರುತ್ತಿದ್ದ ನರಸಿಂಗರಾಯ ಹೇಳುತ್ತಿದ್ದ: 'ಹೆಬ್ಬೆಟ್ಟಿಗೂ ಓಟು ಕೊಡಿಸಿದ ಮಹಾತ್ಮ ಅಂಬೇಡ್ಕರ್. ಆ ಓಟಿಗಾಗಿ ನೋಟು ಕೊಟ್ಟ ಪುಢಾರಿ. ಅವನು ಕೊಡ್ತಾನಂತ ತಗೊಳ್ಳೋರು ಎಂಥಾ ಘನಂದಾರಿ ಜನ? ನೋಟಿಗೆ ಓಟು ಕೊಂಡುಕೊಂಡೋನು ನೆಟ್ಟಗೆ ಜನರ ಕೆಲಸ ಮಾಡ್ತಾನ? ಮಾಡ್ಸು ಅಂತ ಕೇಳೋ ನಿಯತ್ತಿನ ಮಾತಿರುತ್ತ ಜನಕ್ಕೆ? ಓಟಿನ ವ್ಯಾಪಾರದ ಕಾಲ ಬರುತ್ತೆ ಅಂತ ಅಂಬೇಡ್ಕರ್‌ಗೆ ಗೊತ್ತಾಗಿದ್ರೆ ಅದಕ್ಕೆ ಅಡ್ಡ ಕಾನೂನು ಮಾಡದೆ ಇರೋರ ಅವರು. ನಾವು ಗಾಂಧೀಗೇನು ಸುಖ ಕೊಟ್ವಿ, ಅಂಬೇಡ್ಕರ್‌ಗೇನು ಸುಖ ಕೊಟ್ವಿ? ಅದಕ್ಕೇ ಪ್ರಜಾಪ್ರಭುತ್ವ ನೆಗೆದುಬಿದ್ದು ಹೋಗ್ತಿರೋದು. ರಾಜಕಾರಣಿಗಳೂ ಬೆಕ್ಕುಗಳೇ, ನಾವೂ ಬೆಕ್ಕುಗಳೇ. ಅದಕ್ಕೇ ಗಂಟೆ ಕಟ್ಟೋರೇ ಇಲ್ದಾಗಿರೋದು? ಚುನಾವಣೆ ಸಂಪಾದ್ನೇಗ, ರಾಜ್ಯ ನಡೆಸೋಕ?'

ತನ್ನ ಮಾತುಗಳಿಂದ ನರಸಿಂಗರಾಯ ಕೆಲವರಿಗೆ ಪಥ್ಯ, ಅನೇಕರಿಗೆ ಅಪಥ್ಯವೆಂದು ವರದಪ್ಪ ತಿಳಿದಿದ್ದಂತೆ ನರಸಿಂಗರಾಯನೂ ಅವನನ್ನು ಇಷ್ಟಪಡುವವರೂ ತಿಳಿದಿದ್ದರು. ಆದರೂ ನರಸಿಂಗರಾಯ ಬೇಕಾಗಿದ್ದ. ಅವರ ಅನೇಕ ಸಮಸ್ಯೆಗಳಿಗೆ ಪರಿಹಾರ ನರಸಿಂಗರಾಯನ ಪ್ರಶ್ನೆಗಳಲ್ಲಿ ಇರುತ್ತಿತ್ತು. ನರಸಿಂಗರಾಯ ಜಡ್ಜಿ ಆಗಬೇಕಿತ್ತು ಎಂಬುದು ಊರಲ್ಲಿನ ಮಾತು.

ತನ್ನವರ, ಪರರ ವ್ಯವಹಾರಗಳಿಗೆ ನರಸಿಂಗರಾಯ ಸುಸೂತ್ರ ಸಲಹೆಗಾರ. 'ಯಾವುದೇ ಪ್ರಮುಖ ಕಾರ್ಯಕ್ಕೆ ಕೈ ಹಾಕುವ ಮೊದಲು ನರಸಿಂಗರಾಯನ ಕಿವಿಗೆ ಹಾಕಿರೋಣ' ಎಂಬ ಮಾತು ಅವನೆಂದರೆ ಇಷ್ಟಪಡದವರ ಮನಸ್ಸಿನಲ್ಲಿಯೂ ಹುಟ್ಟುತ್ತಿತ್ತು. ಅವರಿಗೂ ಕೇಡದ ಸಲಹೆಗಳನ್ನು ಕೊಡುತ್ತಿದ್ದ. ಅನ್ಯಾಯದ್ದಲ್ಲವಾದರೆ ಅವರ ವ್ಯವಹಾರವನ್ನು ಗುಟ್ಟು ಮಾಡುತ್ತಿದ್ದ.

'ನರಸಿಂಗರಾಯನೇನು ಬಿ.ಎ. ಮಾಡಿ ಆಫೀಸರು ಆಗಬೇಕಿಲ್ಲ. ಹತ್ತನೇ ತರಗತಿ ಪಾಸಾದರೆ ಆಯಿತು. ತನ್ನ ಶಾನುಬೋಗಿಕೆ ನಡೆಸಲಿ ಸಾಕು. ಒಂದಷ್ಟು ಪಿತ್ರಾರ್ಜಿತ ಭೂಮಿ ಇದೆ. ಜೊತೆಗೆ ವೇಣುಗೋಪಾಲಸ್ವಾಮಿ ಗುಡಿಯ ಪೂಜಾರಿಕೆ ಇದೆ' ಅನ್ನುವುದು ಅವನ ಅಪ್ಪನ ನಿಲುವಾಗಿತ್ತು. ಆದರೆ ನರಸಿಂಗರಾಯ ಹತ್ತನೇ ತರಗತಿಯಲ್ಲಿರುವಾಗಲೇ ಶಾನುಬೋಗಿಕೆ ರದ್ದಾಯಿತು. ನರಸಿಗರಾಯ ಪಾಸೂ ಆಗಲಿಲ್ಲ.

ಮಗ ಬಿ.ಎ. ಮಾಡಬೇಕು, ಆಫೀಸರ್ ಆಗಬೇಕು ಎಂಬುದು ವರದಪ್ಪನ ಅಪ್ಪನ ದೊಡ್ಡ ಆಸೆ. ಮಾಲೂರಿನಲ್ಲಿ ಗುರುವಾರ ಸಂತೆ. ಮಲಿಯಪ್ಪನಹಳ್ಳಿ ಜನ ಅಲ್ಲಿಂದಲೇ ಮನೆಗೆ ಸರಕುಗಳನ್ನು ತರುತ್ತಿದ್ದುದು. ಸಂತೆಗೆ ಹೋಗುವ ದಾರಿ ಪಕ್ಕ ಒಂದು ಹುತ್ತವಿತ್ತು. ಜನ ಸಂತೆಗೆ ಹೋಗುವಾಗ ನಾಗಪ್ಪ ತಣ್ಣಗಿರಲೆಂದು ತಂಗಡಿ ಇಲ್ಲವೆ ಕಕ್ಕೆಗಿಡದ ಒಂದೆರಡು ರೆಪ್ಪೆಗಳನ್ನು ಕಿತ್ತು ಹುತ್ತದ ಮೇಲೆ ಹಾಕಿ, ನಮಸ್ಕರಿಸಿ ಹೋಗುತ್ತಿದ್ದರು. ಅಂಥವರಲ್ಲಿ ವರದಪ್ಪನ ಅಪ್ಪನೂ ಒಬ್ಬ. ಹೀಗೊಂದು ಗುರುವಾಗ ಸಂತೆಗೆ ಹೋಗುತ್ತ ಕಕ್ಕೆ ಎಲೆಯನ್ನು ಹಾಕಿ, ನಮಸ್ಕಾರ ಮಾಡಲು ಹುತ್ತವನ್ನು ಮುಟ್ಟಿದಾಗ ಸೊಪ್ಪಿನ ಮರೆಯಲ್ಲಿದ್ದ ಎಳೆನಾಗರ ಕಚ್ಚಿತು. ಮಂತ್ರ ಹಾಕಿಸಿದರೂ ವಿಷ ಇಳಿಯದೆ ಸತ್ತು ಹೋದ. ವರದಪ್ಪ ಶಾಲೆ ಬಿಟ್ಟ.

ಶಾಲೆಯಲ್ಲಿ ಗೆಳೆಯರಾಗಿದ್ದವರು ಶಾಲೆ ಬಿಟ್ಟ ಮೇಲೂ ಗೆಳೆಯರಾಗಿಯೇ ಊರಿನಲ್ಲಿ ಉಳಿದರು. ವರದಪ್ಪ ಜಿರಾಯ್ತಿದಾರನಾದ. ನರಸಿಂಗರಾಯ ವೇಣುಗೋಪಾಸ್ವಾಮಿ ಗುಡಿಯ ಪೂಜಾರಿಯಾದ. ಅಪ್ಪನ ಮರಣವಾದ ಮೇಲೆ ಜಿರಾಯ್ತಿದಾರನೂ ಆದ. ಕೆಲವು ವರ್ಷ ನಡೆಸಿದ ಪೂಜಾರಿಕೆಯನ್ನು ಚಿಕ್ಕಪ್ಪನ ಮಗನಿಗೆ ಬಿಟ್ಟುಕೊಟ್ಟ. ಯಾಕೆಂದು ವರದಪ್ಪ ಕೇಳಿದ್ದಕ್ಕೆ, 'ನಾನೇನಂಥ ಭಕ್ತ ತೆಗಿ. ಅವನಲ್ಲಿ ಭಕ್ತಿಯಿದೆ. ಭಕ್ತನ ಪೂಜೇನೇ ದೇವರಿಗೆ ಸಲ್ಲೋದು. ಬಡವ ಅವನು. ಅವನು ಬದುಕೋಕೆ ಒಂದು ದಾರಿಬೇಕಲ್ಲ. ಅವನಿಗೇ ಅಂತಲ್ಲ' ಅಂದಿದ್ದ.

ನರಸಿಂಗರಾಯ, ವರದಪ್ಪ ಸ್ನೇಹಿತರಾಗಿದ್ದಂತೆ ನರಸಿಂಗರಾಯನ ಹೆಂಡತಿ ಸಾವಿತ್ರಮ್ಮ, ವರದಪ್ಪನ ಹೆಂಡತಿ ರಾಮುಲಮ್ಮ ಆಪ್ತರಾಗಿದ್ದರು. ಎರಡು ಕುಟುಂಬಗಳ ನಡುವೆ ಆಪ್ತತೆಯ ಬಂಧವಿತ್ತು. ಈ ಬಂಧವೇ ಎರಡೂ ಕುಟುಂಬಗಳ ಒಟ್ಟಿಗಿನ ವ್ಯವಹಾರಗಳಿಗೆ ಕಾರಣವಾಗಿತ್ತು. ರಾಮುಲಮ್ಮನಿಗೆ ಸಾವಿತ್ರಮ್ಮನ ಮಡಿಯ ನಡುವೆಯೂ ಅಡುಗೆಮನೆಗೆ ಪ್ರವೇಶವಿತ್ತು. ಆದರೆ ಸಾವಿತ್ರಮ್ಮ ತುಳಸಿಕಟ್ಟೆಗೆ ಪೂಜೆ ಮಾಡಿದ ನಂತರವಷ್ಟೆ.

***

ಕೆಲವು ದಿನಗಳಿಂದ ನರಸಿಂಗರಾಯ ಊರಿಗೇ